**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.</u>**

<u>ಸಿ.ಸಿ. ನಂ.4/2020</u>

CW-1/PW-1

| | | |
|---|---|---|
| ಹೆಸರು | : | ಸುಶ್ಮಿತ |
| ತಂದೆಯ ಹೆಸರು | : | ಕಾಮರಾಜು |
| ವಯಸ್ಸು | : | 29 ವರ್ಷ |
| ವೃತ್ತಿ | : | ಸಾಫ್ಟ್ ವೇರ್ ಇಂಜಿನೀಯರ್ |
| ವಾಸ ಸ್ಥಳ | : | ಚನ್ನಪಟ್ಟಣ |
| ದಿನಾಂಕ | : | 29-01-2026 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ದಿನಾಂಕ 25.02.2019ರಂದು ನಾನು ಚನ್ನಪಟ್ಟಣದಿಂದ ಬೆಂಗಳೂರಿಗೆ ಅಂತಿಮ ಸೆಮಿಸ್ಟರ್ ನಲ್ಲಿ ವಿದ್ಯಾಭ್ಯಾಸ ಮಾಡಲು ಹೋಗುತ್ತಿದ್ದಾಗ ಸಂಜೆ 4.45-5.00 ಗಂಟೆಗೆ ರೈಲಿನಲ್ಲಿ ಚನ್ನಪಟ್ಟಣಕ್ಕೆ ಹೋಗುತ್ತಿದ್ದಾಗ ರಾಮನಗರ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆ ಕೊಟ್ಟು ನಂತರದಲ್ಲಿ ರೈಲು ಚಲಿಸಲು ಪ್ರಾರಂಭವಾಗುತ್ತಿದ್ದಾಗ ನನ್ನ ಹಿಂಬದಿಯಿಂದ ಒಬ್ಬ ಆಸಾಮಿ ಬಂದು ನನ್ನ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಹೊರಟುಹೋದನು. ಅದು 28 ಗ್ರಾಂ ತೂಕವಿತ್ತು. ನಂತರ ರಾಮನಗರದ ಪೊಲೀಸರು ಬಂದು ಹುಡುಕಾಡಿದರು, ಆತ ಸಿಗಲಿಲ್ಲ. ನಂತರ ಮಾರನೇ ದಿನ ಮನೆಯಲ್ಲಿ ಮಾತನಾಡಿ ದಿನಾಂಕ 27.02.2019ರಂದು ಬೆಂಗಳೂರಿನ ರೈಲ್ವೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ದೂರನ್ನು ನೋಡಿದರೆ ಗುರುತಿಸಬಲ್ಲೆ. ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಿರುತ್ತೇನೆ.

2. ನಂತರ ಮೇ ತಿಂಗಳಲ್ಲಿ ಪೊಲೀಸರು ನನಗೆ ದೂರವಾಣಿ ಕರೆ ಮಾಡಿ

ನಿಮ್ಮ ಚಿನ್ನದ ಸರವನ್ನು ಬಂದು ಗುರುತಿಸಿ ಎಂದು ಹೇಳಿದರು. ನಾನು ಬೆಂಗಳೂರಿನ ರೈಲ್ವೆ ಪೊಲೀಸ್ ಠಾಣೆಗೆ ಹೋದೆ. ಅಲ್ಲಿ ನನ್ನ ಚಿನ್ನದ ಸರ ಠಾಣೆಯಲ್ಲಿತ್ತು, ಅದನ್ನು ಗುರುತಿಸಿದೆ. ನನ್ನ ಚಿನ್ನದ ಸರವನ್ನು ಕಿತ್ತುಕೊಂಡು ಹೋಗಿದ್ದ ವ್ಯಕ್ತಿಯನ್ನು ಪೊಲೀಸ್ ಠಾಣೆಯಲ್ಲಿ ತೋರಿಸಿದರು, ನಾನು ಆತನನ್ನು ನೋಡಿ ಗುರುತಿಸಿದೆ. ಆತನನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯನ್ನು ರಾಮನಗರದ ಕಾರಾಗೃಹದಿಂದ ವಿ.ಸಿ. ಮುಖಾಂತರ ಹಾಜರುಪಡಿಸಿದ್ದು ಆತನನ್ನು ಸಾಕ್ಷಿ ಗುರುತಿಸಿರುತ್ತಾರೆ. ನನ್ನ ಚಿನ್ನದ ಸರವನ್ನು ನಾನು ಪೊಲೀಸ್ ಠಾಣೆಯಿಂದ ಬಿಡಿಸಿಕೊಂಡೆ. ಅದು ನನ್ನ ಬಳಿಯೇ ಇದೆ. ನನಗೆ ಚಿನ್ನದ ಸರ ಬಿಡುವಾಗ ಪೊಲೀಸರು ಮಹಜರ್ ಮಾಡಿರುತ್ತಾರೆ. ಮುಚ್ಚಳಿಕೆ ಬರೆದುಕೊಟ್ಟು, ಚಿನ್ನದ ಸರ ಬಿಡಿಸಿಕೊಂಡಿರುತ್ತೇನೆ. ನಾನು ಚಿನ್ನದ ಸರವನ್ನು ಬಿಡಿಸಿಕೊಳ್ಳುವಾಗ ಪೊಲೀಸರು ಫೋಟೋ ತೆಗೆದಿರುತ್ತಾರೆ. ಸದರಿ ಫೋಟೋವನ್ನು ನಿಪಿ-2 ಎಂದು, ಆರೋಪಿಯ ಫೋಟೋಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಿರುತ್ತೇನೆ. ನಾನು ಚಿನ್ನದ ಸರವನ್ನು ಬಿಡಿಸಿಕೊಳ್ಳುವಾಗ ತೆಗೆದ ಮತ್ತೊಂದು ಫೋಟೋವನ್ನು ನಿಪಿ-5 ಎಂದು ಗುರುತಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರಃ-</u>

ಶ್ರೀ ಮುರಳಿ, ವಕೀಲರು ಹಾಜರಾಗಿ ಕಾರಾಗೃಹದ ಅಧಿಕಾರಿಗಳ ಮುಂದೆ ಆರೋಪಿ ಖಾಸಗಿ ವಕೀಲರನ್ನು ನೇಮಿಸಿಕೊಂಡಿರುವುದಾಗಿ ಪತ್ರ ಬರೆದಿದ್ದು, ಅದರ ಪ್ರತಿಯನ್ನು ಡಿ.ಎಲ್.ಎಸ್.ಎ.,ನಿಂದ ನನಗೆ ಕಳುಹಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಆರೋಪಿಯು ಗಿರೀಶ್ ಎಂಬ ವಕೀಲರನ್ನು ನೇಮಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಆರೋಪಿಯ ಪರವಾಗಿ ಯಾವುದೇ ವಕೀಲರು ವಕಾಲತ್ ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು

ತೆಗೆದುಕೊಳ್ಳಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.